2012–13	06 ಸಂಖ್ಯೆ ಸಣ್ಣ ಮಳಿಗೆಗಳ ಅಭಿವೃದ್ಧಿ	2.02.
2013–14	10 ಸಂಖ್ಯೆ ಅಂಗಡಿ ಗೋದಾಮು ದುರಸ್ಥಿ	11.00
	02 ಸಂಖ್ಯೆ ಮುಚ್ಚಿದ ಹರಾಜುಕಟ್ಟೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ದೀಪ ಅಳವಡಿಸುವುದು	1.00

ಮಂಡ್ಯ – ನಾಗಮಂಗಲ ರಸ್ತೆ – ಮಾಗಡಿ – ಶ್ರವಣಬೆಳಗೊಳ ರಸ್ತೆಯ ಅಭಿವೃದ್ಧಿ

886 (1673); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

(ಅ) ಮಂಡ್ಯ–ನಾಗಮಂಗಲ ರಸ್ತೆಯು ಹದಗೆಟ್ಟು ದುಸ್ಥಿತಿಯಲ್ಲಿರುವುದು ಗಮನಕ್ಕೆ ಬಂದಿದೆಯೇ; ಈ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಪರಿವರ್ತಿಸಲು ಕ್ರಮ ತೆಗೆದುಕೊಳ್ಳಲಾಗುವುದೇ;

(ಆ) ಮಾಗಡಿ–ಹುಲಿಯೂರುದುರ್ಗಾ–ದೇವಲಾಪುರ–ನಾಗಮಂಗಲ–ಬೆಟ್ಟಡ ಹಳ್ಳಿ–ಶ್ರವಣಬೆಳಗೊಳ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ–48ಕ್ಕೆ ಪರ್ಯಾಯ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸಲು ಕ್ರಮ ತೆಗೆದುಕೊಳ್ಳ ಲಾಗುವುದೇ;

(ಇ) ಹುಮ್ನಾಬಾದ್–ಶ್ರೀರಂಗಪಟ್ಟಣ ರಾಷ್ಟ್ರೀಯ ಹೆದ್ದಾರಿಯಲ್ಲಿ ಜೇವರ್ಗಿ–ಶ್ರೀರಂಗಪಟ್ಟಣ ಭಾಗದ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ನೋಟಿಫಿಕೇಶನ್ ಹೊರಡಿಸದೇ ಇರುವುದರಿಂದ ಈ ರಸ್ತೆಯ ಅಭಿ ವೃದ್ಧಿಯಲ್ಲಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು)

ಡಾ. ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಮಂಡ್ಯ–ನಾಗಮಂಗಲ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು 33.80 ಕಿ. ಮೀ. ಉದ್ದವಿರುತ್ತದೆ. ಸದರಿ ರಸ್ತೆಯ ಸರಪಳಿ 4.25 ರಿಂದ 25.80 ಕಿ. ಮೀ. ವರೆಗೆ ಗುಂಡಿಗಳು ಉಂಟಾಗಿ ದುಸ್ಥಿತಿಯಲ್ಲಿದ್ದು, ಸರಪಳಿ 4.25 ರಿಂದ 25.80 ಕಿ. ಮೀ. ವರೆಗೆ ರಸ್ತೆಯ ಗುಂಡಿ ಮುಚ್ಚುವ (ನಿರ್ವಹಣೆ) ಕಾರ್ಯಕ್ರಮ ಲೆಕ್ಕ ಶೀರ್ಷಿಕೆ 3054 ರಲ್ಲಿ 2014–15ನೇ ಸಾಲಿನಲ್ಲಿ ಕೈಗೊಳ್ಳಲು ಕ್ರಮ ವಹಿಸಲಾಗುವುದು. ಸದರಿ ರಸ್ತೆಯ ಸರಪಳಿ 0.0 ರಿಂದ 4.25ರ ವರೆಗೆ ಕೇಂದ್ರ ರಸ್ತೆ ನಿಧಿ ಅನುದಾನದಿಂದ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ.

ಸದರಿ ರಸ್ತೆಯನ್ನು ದ್ವಿಪಥ ರಸ್ತೆಯನ್ನಾಗಿ ಪರಿವರ್ತಿಸುವ ಯಾವುದೇ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

(ಆ) ಮಾಗಡಿ–ಹುಲಿಯೂರುದುರ್ಗಾ–ದೇವಲಾಪುರ–ನಾಗಮಂಗಲ–ಬೆಟ್ಟದ ಹಳ್ಳಿ–ಶ್ರವಣಬೆಳಗೊಳ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ 48ಕ್ಕೆ ಪರ್ಯಾಯ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಅನುದಾನ ಲಭ್ಯತೆಯನ್ನಾಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು.

(ಇ) ಕೇಂದ್ರ ಸರ್ಕಾರವು ಶ್ರೀರಂಗಪಟ್ಟಣ–ಜೇವರ್ಗಿ ರಸ್ತೆಯನ್ನು ದಿನಾಂಕ: 28.05.2014 ರಂದು ಸೆಕ್ಷನ್–5ರ ಪ್ರಕಾರ ರಾಷ್ಟ್ರೀಯ ಹೆದ್ದಾರಿ–150ಎ ಎಂದು ನೋಟಿಫಿಕೇಷನ್ ಹೊರಡಿಸಿರುತ್ತದೆ. ಈ ದಿಶೆಯಲ್ಲಿ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಕೇಂದ್ರ ಭೂ ಸಾರಿಗೆ ಸಚಿವಾಲಯಕ್ಕೆ ಸಲ್ಲಿಸಲಾಗಿರುವ ವಾರ್ಷಿಕ ಯೋಜನಾ ಪ್ರಸ್ತಾಪವನೆಯಲ್ಲಿ ಸೇರ್ಪಡೆಗೊಂಡಿದ್ದು, ಅನುಮೋದನೆ ದೊರೆತ ನಂತರ ಮುಂದಿನ ಅಗತ್ಯ ಕ್ರಮವನ್ನು ಜರುಗಿಸಲಾಗುವುದು.